ನಾಲ್ಕಾರು ಮನೆಗಳಾಚೆಯ ಚಿನ್ಮಯಿ ಬ್ಯಾಂಕ್ ಉದ್ಯೋಗಿ. ಅವಳ ತಂದೆ ಭೋಜರಾಯರೂ ಜನಾರ್ದನರೂ ಸಹಪಾಠಿಗಳಾಗಿದ್ದವರು, ಹಳೆಯ ಪರಿಚಯ.

ಚಿನ್ಮಯಿಯ ಸಂಸಾರವೆಂದರೆ ಪತಿ ಮನೋಹರ್, ಮಗಳು ಅನ್ವಿತಾ, ಕೆಲಮೊಮ್ಮೆ ಬಂದು ಜೊತೆಗೂಡುವ ತಾಯಿ ರೋಹಿಣಿ ಇಷ್ಟೇ ಮಂದಿ. ದಾರಿಯಲ್ಲಿ ಆಗೀಗ ಭೇಟಿಯಾಗುವ ಜನಾರ್ದನರನ್ನು ಕಂಡಾಗ ಅವರ ಒರಟು ಮಾತು ನೆನೆದು ಭಯಪಡುವ ಚಿನ್ಮಯಿ, ನಾಗೇಶನನ್ನು ಕಂಡರೆ ಅಕ್ಕನಂತೆ ವಾತ್ಸಲ್ಯದ ಮೂರ್ತಿಯಾಗುವಾಕೆ. ಅವರನ್ನು ಆದಷ್ಟೂ ನಿವಾರಿಸಿಕೊಳ್ಳುವಾಕೆ ಇವನನ್ನು ನಿರಾಳ ಮಾತನಾಡಿಸುವ ರೂಢಿ ಇರಿಸಿಕೊಂಡಿದ್ದಳು. ರಸ್ತೆಯಲ್ಲಿ ಒಮ್ಮೊಮ್ಮೆ ಇಬ್ಬರಿಗೂ ಮುಖಾಮುಖಿ, ಒಂದೆರಡು ಉಭಯ ಕುಶಲೋಪರಿ.

'ಹೇಗಿದ್ದೀರಿ ಅಕ್ಕಾ? ಅನ್ವಿತಾಗೆ ಕಾಲೇಜು ಹೇಗಾಗ್ತದಂತೆ?'

'ಹಾಂ, ಪರವಾಗಿಲ್ಲಾ. ಅದಿರ್ಲಿ.. ನಿನ್ನ ಸಿಹಿ ಊಟ ಯಾವಾಗ ನಾಗೇಶ್ ? ನಿನ್ನ ಜಾತಕ, ಬಯೋಡೇಟ ಕೊಡು ನೋಡುವ'

'ಹಾಂ'.. ಅನ್ನುತ್ತ ನಾಗೇಶ ಮತ್ತಷ್ಟು ಮಂಕುಗಟ್ಟುತ್ತಿದ್ದ, ಇದ್ದ ಮಂದಹಾಸವೂ ಮಾಯವಾಗಿ ! ಈ ನೀರವ ಪರಿ ಚಿನ್ಮಯಿಯಲ್ಲಿ ಅಚ್ಚರಿ, ಅನುಮಾನ ಹುಟ್ಟು ಹಾಕುತ್ತಿತ್ತು.

'ಯಾಕೆ ಇವ ಹೀಗೆ? ಆ ಘಾಟಿ ಮುದುಕ ಇವ್ನ ಜಾತಕ ಬರೆಸಿದ್ದಾರೋ ಇಲ್ವೋ? ಅಥವಾ ಕೊಡಲು ಹಿಂಜರಿಕೆಯೊ? ಏನು ಸಮಸ್ಯೆಯೊ?'

ಆದರೂ ನೇರ ಕೇಳಲಾಗದೆ ಮೌನಕ್ಕೆ ಶರಣಾಗುತ್ತಿದ್ದಳು. ನಾಗೇಶನಿಗೆ ಬರುವ ಕೆಲವೊಂದು ಸಂಬಂಧಗಳು ಜನಾರ್ದನರ ಕಟು ಮಾತಿನ ನೇರಪ್ರಹಾರಕ್ಕೆ ಪ್ರಾರಂಭಿಕ ಹಂತದಲ್ಲೇ ಮುರಿದು ಬೀಳುತ್ತಿದ್ದುದು ಸುಳ್ಳೇನಲ್ಲ. ಹೊರಗಿನವರಿಂದ ಈ ವಿಚಾರ ಅರಿವಾದಾಗ ಚಿನ್ಮಯಿಗೆ ವಿಷಾದಪರ್ವ. ಜಾತಕವಿಲ್ಲ, ಬಯೋಡೇಟಾವಿಲ್ಲ. ಪಂಚಾಂಗವಿಲ್ಲದೆ ತಾನು ಕಟ್ಟುವ ಕಾರ್ಯ ಆರಂಭಿಸುವ ಬಗೆ ಹೇಗೆ? ಏನಿಲ್ಲದಿದ್ದರೂ ಅವಳಿಗೆ ಕಾಳಜಿ ಇತ್ತು ಅವನ ಬಗ್ಗೆ. ಆಗೀಗ ಪರಿಚಿತರಲ್ಲಿ ನೇರ ಪ್ರಸ್ತಾಪವಷ್ಟೇ ಅವಳ ಪಾಲಿನ ಕೆಲಸ.. ಫಲಿತಾಂಶ ಶೂನ್ಯವಾದರೂ ಮರಳಿ ಅದೇ ಯತ್ನದ ಹಾದಿಯಲ್ಲಿ ಅವಳು.

ಇತ್ತೀಚೆಗೆ ಚಿನ್ಮಯಿ ಸ್ಕೂಟಿ ಖರೀದಿಸಿದ್ದಳು, ಬ್ಯಾಂಕಿಗಾಗಿ ನಿತ್ಯ ಬಸ್ಸಿನತ್ತ ನಡೆದಾಡುವ, ಮತ್ತೆ ಬಸ್ಸಿನೊಳಗೆ ನೇತಾಡುವ ಕರ್ಮ ಇನ್ನಿಲ್ಲವೆಂಬ ಖುಷಿ ಅವಳಿಗೆ. ಅತ್ತ ನಾಗೇಶನೂ ಸ್ಕೂಟರ್ ಸವಾರನಾದ.

ಇಬ್ಬರ ಭೇಟಿ ವಿರಳದ ಹಾದಿ ಹಿಡಿಯಿತು, ಎಂದಾದರೂ ದೂರವಾಣಿ ಹತ್ತಿರ ಬೆಸೆಯಬೇಕಿತ್ತು.

ಅದೊಂದು ದಿನ 'ಮುಹೂರ್ತ' ಕಲ್ಯಾಣ ಮಂಟಪದಲ್ಲಿ ಅದ್ದೂರಿಯ ವಿವಾಹ ಸಮಾರಂಭ ನಡೆಯಲಿತ್ತು. ವಧು ಭಾವನಾ ಚಿನ್ಮಯಿಯ ಸಹೋದ್ಯೋಗಿ. ದೂರದ ಸಂಬಂಧಿ ಬೇರೆ. ಮುನ್ನಾದಿನ ಸಂಜೆಯೇ ಮದುವೆಗೆ ಹೋಗುವ ಬಗ್ಗೆ ಪ್ಲಾನ್ ಹಾಕತೊಡಗಿದ್ದಳು ಅವಳು.

'ಹೇಗೂ ಅಮ್ಮ ,ಮನೆಯಲ್ಲಿದ್ದಾರಲ್ಲ? ಲೀವ್ ಹಾಕಿ ಮನೆಯಿಂದ್ಲೇ ಒಟ್ಟಿಗೆ ಹೋಗಿ ಬಂದ್ರಾಯ್ತು'

ಅಮ್ಮನಲ್ಲಿ ವಿಷಯ ಪ್ರಸ್ತಾಪಿಸಿದ್ದಾಯ್ತು. ಒಮ್ಮೆಲೇ ನೆಲವೇರಿದರು ರೋಹಿಣಿ. 'ಹೌದಲ್ಲ? ಭಾವನಾ ಮದುವೆ.. ಆ ವಾಸುದೇವನ ಮಗಳಲ್ವಾ? ಗೊತ್ತಾಯ್ತು ಬಿಡು.. ನೀನು ಲೀವ್ ಹಾಕಿದ್ದೂ ಸಾರ್ಥಕ ಆಗ್ಬೇಕಲ್ವಾ? ಅಲ್ಲಿ ಯಾರೆಲ್ಲಾ ಸಿಕ್ತಾರೆ, ಮಾತಾಡ್ಲಿಕ್ಕೆ! ನಾನು ಎವರೆಡಿ' ನಗುತ್ತ ಅಂದವರು ಮತ್ತೆ ಪ್ರಶ್ನಿಸಿದರು.

'ಹುಡುಗ ಏನ್ಮಾಡ್ತಿದ್ದಾನಂತೆ?'

'ಅವನೂ ಬ್ಯಾಂಕಲ್ಲಿದ್ದಾನಂತೆ, ಕಾರವಾರದಲ್ಲಿ'

'ಹೌದಾ? ಆಯ್ತು ನಾಳೆ ಹೋಗ್ವಾ'

ಮರುದಿನ ಬೆಳಿಗ್ಗೆ ಮದುವೆಗೆ ಹೊರಡುವ ತಯಾರಿ ಎಂಬ ಪ್ರಧಾನ ಕೆಲಸವನ್ನು ಕೈಗೆತ್ತಿಕೊಂಡಿದ್ದರು ತಾಯಿ ಮಗಳು. ಚಿನ್ಮಯಿಗೆ ಪೂರ್ಣ ಸಿಂಗಾರದ ಪರಿವೇಶ. ಒಡಲ ತುಂಬಾ ಸ್ವರ್ಣಲತಾ ಚಿತ್ತಾರದ ಹಸಿರು ರೇಶ್ಮೆಸೀರೆ, ಮ್ಯಾಚಿಂಗ್ ಹಸಿರು ಕಲ್ಲಿನ ಬಳೆಗಳು, ಹಸಿರು ಕಲ್ಲಿನ ಹೂದಳಗಳ ನೆಕ್ಲೇಸ್ ಧರಿಸಿದ್ದಾಯ್ತು. ಸೀರೆ ಜರಿಗೆ ಹೊಂದಿಕೆಯಾಗಲು ಒಂದು ಸಪುರ ಚೈನ್ ಕೊರಳು ತುಂಬಿತು. ವದನ, ಅಧರಗಳು ವರ್ಣ ಲೇಪನದಿಂದ ಕಳೆಯೇರಿದವು. ಕೆದರು ಕೇಶಮಲ್ಲಿಗೆ ಮಾಲೆ ಪುಷ್ಪಿತವಾಗಿ ಸೌರಭ, ಲಾವಣ್ಯ ಸೂಸುತ್ತಾ ತೊನೆದಾಡಿತು.

ಆಹಾ! ಹಸಿರು ಚಿಮ್ಮುವ ಲತೆ ಎಂಬಂತೆ ಲಕಲಕಿಸುತ್ತಿರುವ ಕರುಳ ಬಳ್ಳಿಯನ್ನು ಕಂಡು ತಾಯಿಗೆ ಆನಂದ, ಹೆಮ್ಮೆ ಉಕ್ಕಿತ್ತು. ಅವರೂ ಸರಸರ ಸಿದ್ಧರಾದರು, ಕಡಿಮೆ ಇಲ್ಲವೆಂಬಂತೆ, ಆಭರಣಗಳ ತೆರೆದ ಪೆಟ್ಟಿಗೆಯಂತೆ!

ಮದುವೆಗೆ ಪ್ರೇಕ್ಷಕರಾಗಿ ಹಾಜರಾಗಲು ಮುಂದಿನ ಹಂತ ಸ್ಕೂಟಿ ಸವಾರಿ. ಚಿನ್ಮಯಿ ಚಾಲಕಿಯಾದರೆ ತಾಯಿ ಹಿಂಬಾಲಕಿ. ಅಂತೂ ಕಲ್ಯಾಣ ಮಂಟಪ ತಲುಪಿದ್ದಾಯ್ತು. ಇದೇ ಮುಂದಿನ ಕಥಾ ತಿರುವಿಗೆ ಪ್ರಮುಖ ವೇದಿಕೆ.

'ಮುಹೂರ್ತ'ದಲ್ಲಿತ್ತು ಕಿಕ್ಕಿರಿದ ಅತಿಥಿ ಸಂದಣಿ.. ತಲೆಗಳ ಚಪ್ಪರ ಸಾಸಿವೆ ಎರಚಿದರೂ ನೆಲಕ್ಕೆ ಬೀಳದೆಂಬಂತೆ ಎಲ್ಲೋ ಜಾಗ ಅರಸಿ ಅರಸಿ ಕೂತದ್ದಾಯ್ತು ತಾಯಿ ಮಗಳಂದಿರು. ಸನಿಹ ಪರಿಚಿತರು ಕಂಡಾಗ ರೋಹಿಣಿ ಮಾತಿನ ಮಹಾಪೂರದಲ್ಲಿ ತೇಲುತ್ತಾ ಖುಷಿ ಪಟ್ಟರೆ, ಪಕ್ಕದಲ್ಲಿನ ಚಿನ್ಮಯಿ ಮೌನವ್ರತ ಹಿಡಿದಾಕೆ.. ಅತ್ತಿತ್ತ ಕಣ್ನೋಟ ಬೀರುತ್ತ..

ಕ್ಷಣಕ್ಷಣವೂ ಹನುಮಂತನ ಬಾಲವಾಗುತ್ತಿದ್ದ ಸರದಿ ಸಾಲು ಹಿಡಿದು ನವಜೋಡಿಗೆ ಶುಭ ಹಾರೈಸಿದರು. ರಸಭೋಜನ ಸವಿದದ್ದೂ ಆಯ್ತು. ದೂರದಲ್ಲೆಲ್ಲೋ ಕಂಡು ನಾಗೇಶ ಕೈ ಬೀಸಿದ.. ಇತ್ತಲಿಂದ ಚಿನ್ಮಯಿಯೂ..

ತಾಯಿ ಮಗಳು ಮರಳಿ ಮನೆ ಸೇರಿಕೊಂಡಾಗ ಅಪರಾಹ್ನ ಎರಡೂವರೆಯ ಸಮಯ. ಪ್ರಖರತೇಜದ ರವಿ ಉರಿದುರಿದು ಸುಸ್ತಾದವನಂತೆ ಸೌಮ್ಯನಾಗ ತೊಡಗಿದ್ದ. ಒಳಬಂದ ಚಿನ್ಮಯಿ ಫ್ಯಾನ್ ಸ್ವಿಚ್ ಅದುಮಿದರು. ಅಲೆಅಲೆಯಾಗಿ ರುಯ್ಯೆಂದ ಗಾಳಿ ತುಸು ಚೇತನ ತುಂಬ ತೊಡಗಿತು. ಕರವಸ್ತ್ರದಿಂದ ಮುಖ, ಕತ್ತು ಎಲ್ಲ ಒರೆಸಿಕೊಳ್ಳುತ್ತಿದ್ದ ರೋಹಿಣಿ ತಲ್ಲಣಗೊಂಡು ತಟ್ಟನೆ ಚೀರಿದರು.

'ಅಯ್ಯೋ ನನ್ನ ನೆಕ್ಲೇಸ್ ಕಾಣೂದಿಲ್ಲ'

'ಹಾ!..ಹೌದಾ. ಕೆಳಗೆ ಬಿತ್ತಾ ಏನಾ? ಮುಖ ಎಲ್ಲಿ ಒರೆಸಿಕೊಂಡ್ಯಲ್ಲ ಈಗ?...'

ಬಗ್ಗಿಬಗ್ಗಿ ನೆಲ ನೋಡಿದರು. ಇಬ್ಬರೂ ಬರಿದಾದ ನೆಲ ವಿಷಣ್ಣತೆಯನ್ನಷ್ಟೇ ಹರಡಿತು. ಕೊಡವಿಕೊಂಡಾಗ ಸೀರೆಯೂ ನಿಷ್ಪಂದ, ನೀರವ.

ಪ್ರಯಾಣದ ದಣಿವು, ಇದೀಗ ಚಿನ್ನ ಕಳಕೊಂಡ ನೋವು ಮುಪ್ಪುರಿಗೊಂಡು ರೋಹಿಣಿಯ ಮುಖ ಪೇಲವವಾಯ್ತು. ಮಗಳು ಬೆನ್ನು ಸವರಿದಳು, ಸಾಂತ್ವನ ಪೂರ್ವಕ.

'ಅಮ್ಮ. ಬರ್ತಾ ದಾರಿಯಲ್ಲಿ ಎಲ್ಲಾದ್ರೂ ಬಿದ್ದಿದ್ರೆ ಗೋವಿಂದ! ಆದ್ರೂ. ಒಮ್ಮೆ ಸ್ಕೂಟಿಯಲ್ಲಿ ಹುಡುಕಿ ಹಾಗೇ ಕಲ್ಯಾಣಮಂಟಪಕ್ಕೆ ಹೋಗಿ ಅಲ್ಲಿ ಆಫೀಸಿನಲ್ಲಿ ಕೇಳಿ ಬರ್ತೇನೆ. ಸಿಕ್ಕಿದವರು ಅಲ್ಲಿ ಕೊಟ್ಟಿರಬಹುದು. ಅಲ್ವಾ! ಸಿಕ್ಲೇಬಾರ್ದು ಅಂತ ಏನೂ ಇಲ್ವಲ್ಲಾ?.. ಅಮ್ಮ ನೀನು ಟೆನ್ಷನ್ ಮಾಡ್ಕೊಳ್ಬೇಡ ಆಯ್ತಾ? ಸ್ವಲ್ಪ ರೆಸ್ಟ್ ತಕ್ಕೋ..ನಾನು ಹೋಗಿ ಬರ್ತೇನೆ'

ಅಪನಂಬಿಕೆ ಹೊತ್ತಿದ್ರೂ ತಲೆ ಅಲುಗಿಸಿದರು ರೋಹಿಣಿ.

ಚಿನ್ಮಯಿ ಮನೆಗೆ ಮರಳಿದಾಗ ಕಳಕೊಂಡಾಕೆ ಬಾಗಿಲಲ್ಲಿ ನಿಂತೇ ಇದ್ದರು, ನಿರೀಕ್ಷೆಯ ಕೊರಳು ಹೊರಳಿಸುತ್ತ. ಸ್ಕೂಟರ್ ನಿಲ್ಲಿಸಿದಾಗಿನ ಚಾಲಕಿಯ ಹಸನ್ಮುಖವೇ ಅವರಿಗೆ ಶುಭ ಒಸಗೆ ಮುಟ್ಟಿಸಿತ್ತು!


'ಅಮ್ಮ.. ತುಂಬ ಲಕ್ಕೀ ನೀನು ತಕ್ಕೋ ನಿನ್ನ ನೆಕ್ಲೇಸ್ ಆಫೀಸಿನಲ್ಲಿ ಕೇಳಿದಾಗ 'ಒಂದು ನೆಕ್ಲೇಸ್ ಸಿಕ್ಕಿದ ..ಅದ್ರ ಡಿಸೈನ್ ಗುರ್ತ ಎಲ್ಲಾ ಹೇಳಿ' ಅಂದ್ರು, ಹೇಳಿದೆ ಕೊಟ್ರು, ತಕ್ಕೊಂಡು ಬಂದೆ. ಅಂತೂ ಸಿಕ್ಕಿತಲ್ಲಾ ಬಿಗಿದ ಕರವಸ್ತ್ರದ ಕಟ್ಟನ್ನು ಅಮ್ಮನತ್ತ ಚಾಚಿದಳು. ಬಿಡಿಸಿದ ರೋಹಿಣಿ ನೆಕ್ಲೇಸ್ ಎತ್ತಿಕೊಂಡರು. ನಗುಮುಖದಿಂದ ಕಣ್ಣಿಗೆ ಒತ್ತಿಕೊಂಡದ್ದೂ ಆಯ್ತು.

'ಅಬ್ಬಾ ದೇವರ ದಯೆ. ಸದ್ಯಕ್ಕೆ ಬಚಾವ್ ಇನ್ನು ಜಾಗ್ರತೆ ಮಾಡ್ತೇನೆ. ಎಲ್ಲಿ?

## ಜೀವನ ಸಂಧಾನ

ಬರ, ಯುದ್ಧ, ಗಲಭೆ, ಭೂಕಂಪ, ಬೆಲೆ ಏರಿಕೆ
ಎತ್ತ ನೋಡಿದರತ್ತ ಬರೀ ನೋವೇ ಈ ಜೀವಕೆ
ಆದರೂ, ಎಲ್ಲರ ಕನಸು ನಗರದ ಐಷಾರಾಮಿ ಜೀವನ
ಬದುಕು, ಬವಣೆ,ತವಕ, ತಲ್ಲಣ ಮೀರಿದ ಸಂಧಾನ

★ ಗಿರಿಧರ ಸ್ಥಪತಿ


ಈಶ್ವರ